ಅದಕ್ಕೋಸ್ಕರ ಸೂಳೆಕೆರೆ ಜಲಾಶಯದಿಂದ ನೀರನ್ನು ಕೊಡುವಂಥ ಕಾರ್ಯಕ್ಕೆ ಒತ್ತಾಯ ಮಾಡುತ್ತಾ ಇದ್ದೇನೆ. ಅದರ ಬಗ್ಗೆ ಏನಾದರೂ ಈ ವರ್ಷ ಯೋಜನೆಯನ್ನು ತಯಾರಿಸಿ, ಸೂಳೆಕೆರೆಯಿಂದ ಚಿತ್ರದುರ್ಗ ನಗರಕ್ಕೆ ನೀರನ್ನು ಕೊಡುವ ಯೋಜನೆಯು ಸರಕಾರಕ್ಕೆ ಇದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂದ್ರ : ಕೆಲವು ಯೋಜನೆಗಳಲ್ಲಿ ಸ್ಕ್ಯಾಂಕ್ಷನ್ ಮಾಡಿದ ಅಂಕಿಅಂಶಗಳು ನಮ್ಮ ಬಗ್ಗೆ ತಾರತಮ್ಯ ಇರುವುದರಿಂದ ಅದನ್ನು ಹೊಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ವಾಟರ್‌ರೇಟ್ ವಿಚಾರ ಹೇಳಿದರು. ನಾನು ಆ ಬಗ್ಗೆ ಸ್ಥಳೀಯ ಶಾಸಕರೊಂದಿಗೆ ವಿಚಾರ ವಿಮರ್ಶೆ ಮಾಡುತ್ತೇನೆ. ಅರ್ಬನ್‌ವಾಟರ್ ಸಪ್ಲೈನ್ ವರ್ಕರ್ಸ್ ಸ್ಟ್ರೈಕ್ ಮಾಡುತ್ತಿದ್ದಾರೆ, ಅವರನ್ನು ಕರೆಸಿಕೊಂಡು ಅವರೊಂದಿಗೆ ಮಾತನಾಡುತ್ತೇನೆ. ಮತ್ತು ಬಿಎಂಆರ್ ಹೆಚ್ಚಿನ ಅಧಿಕಾರ ಕೊಡಬೇಕೆಂದು ಕೇಳಿಕೊಂಡಿದ್ದಾರೆ, ಆ ಬಗ್ಗೆ ನಾವು ಈಗಾಗಲೇ ಒಂದು ಪ್ರೊಪೋಸಲ್‌ನ್ನು ಕಳುಹಿಸಿಕೊಟ್ಟಿದ್ದೇವೆ. ಅದರ ಕಮೀಶನ್‌ರವರಿಗೆ ಈಗಾಗಲೇ ಹೇಳಿದ್ದೇವೆ. ಮಾನ್ಯ ರಮಾನಾಥ ರೈಯವರು ನೋಮೆನ್ಸ್ ಲ್ಯಾಂಡ್ ವಿಚಾರವನ್ನು ಹೇಳಿದ್ದಾರೆ. ಅದು ಜಿಲ್ಲಾಪರಿಷತ್‌ನವರದ್ದೂ ಅಲ್ಲ, ಪುರಸಭೆಯವರದ್ದೂ ಅಲ್ಲ, ಅದರ ವಿಚಾರದಲ್ಲಿ ಪರಿಶೀಲಿಸಿ ಅದನ್ನು ಪುರಸಭೆಯವರಿಗೆ ಮಾಡಬೇಕೆ, ಮುನ್ಸಿಪಾಲಿಟಿಯವರಿಗೆ ಮಾಡಬೇಕೆ ಎಂಬುದನ್ನು ವಿಚಾರ ಮಾಡುತ್ತೇವೆ. ಮಾನ್ಯ ಅಲ್ಲಂ ವೀರಭದ್ರಯ್ಯನವರು ಬಳ್ಳಾರಿ ವಾಟರ್‌ಸಪ್ಲೈ ವಿಚಾರದಲ್ಲಿ ಮಾತನಾಡಿದರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ...

ಶ್ರೀ ಕೆ.ಜೆ. ಜಾರ್ಜ್ : ಆ ಮೇಲೆ ತಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ...

ಅಧ್ಯಕ್ಷರು : ನಿಮ್ಮ ವಿಚಾರದಲ್ಲಿ ಕೊನೆಗೆ ಬರುತ್ತಾರೆ..

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರ ಒಂದು ತಂತ್ರ ನನಗೆ ಅರ್ಥವಾಗುತ್ತಾ ಇದೆ. ನಿಮ್ಮ ತಂತ್ರದಲ್ಲಿ ಮಾನ್ಯ ಮೊಯ್ಲಿಯವರು ಕೂಡ ಸೇರಿದ್ದಾರೆ ಎಂಬುದು ನನಗೆ ಗೊತ್ತು. ಕೊನೆಯಲ್ಲಿ ಹೇಳಿದ ಹಾಗೆ, ಹೇಳಿ ಆಮೇಲೆ ನೋಡೋಣ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ.

(ಗೊಂದಲ)

ನಿಮ್ಮ ತಂತ್ರಗಾರಿಕೆಯನ್ನು ನಾನು ಒಪ್ಪುವುದಿಲ್ಲ. ಇದು ಆಗುವುದಿಲ್ಲ. ನಮ್ಮ ರಾಜ್ಯವನ್ನು ನೀವು ತಮಿಳುನಾಡು ರಾಜ್ಯವಾಗಿ ಮಾಡುವುದಕ್ಕೆ ಹೊರಟಿದ್ದೀರಾ? ಇದು ಆಗುವುದಿಲ್ಲ. ಕರ್ನಾಟಕವನ್ನು ಏನು ಮಾಡುವುದಕ್ಕೆ ಹೊರಟಿದ್ದೀರಿ? ಈ ಕೂಡಲೇ ಅದನ್ನು ತೆಗೆಯುತ್ತೇವೆ ಎಂದು ಹೇಳಬೇಕು.

(ಮಾನ್ಯ ಸದಸ್ಯರು ಪ್ರತಿಭಟನೆ ವ್ಯಕ್ತಪಡಿಸಿ ಅಧ್ಯಕ್ಷರ ಪೀಠದ ಮುಂದಿನ ಭಾಗದಲ್ಲಿ ಧರಣಿ ಕುಳಿತರು)

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಷಫಿ ಅವರು ತುಮಕೂರು ಸ್ಲಮ್‌ಗೆ ಪಕ್ಕು ಪತ್ರವನ್ನು ಕೊಡುವ ಬಗ್ಗೆ ಹೇಳಿದ್ದಾರೆ. ಈ ವಿಚಾರವನ್ನು ಆದಷ್ಟು ಬೇಗ ನೋಡುತ್ತೇನೆ. ಕುಡಿಯುವ ನೀರಿನ ಬಗ್ಗೆ ಈಗಾಗಲೇ ನಾವು ಪ್ರೋಗ್ರಾಮ್‌ನ್ನು ತೆಗೆದುಕೊಂಡಿದ್ದೇವೆ.